**ದಿನಾಂಕಃ 04-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ವಿ.ಎಸ್.ಕೆ ವಕೀಲರಿಂದ ಃ-**

ನಾನು ನನ್ನ ಮುಖ್ಯ ವಿಚಾರಣೆ ಪರವಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲ ವಿಷಯಗಳನ್ನು ಓದಿ, ತಿಳಿದುಕೊಂಡು ಅದಕ್ಕೆ ನನ್ನ ಸಹಿಯನ್ನು ಹಾಕಿರುತ್ತೇನೆ. ಅದರಲ್ಲಿನ ಎಲ್ಲ ಸಂಗತಿಗಳು ಸತ್ಯವಾಗಿರುತ್ತವೆ. ಅದನ್ನು ನಾನೇ ಹೇಳಿ ಬರೆಸಿರುತ್ತೇನೆ.

1. ಹೊಸನಗರ ತಾಲ್ಲೂಕು ಬರುವೆ ಗ್ರಾಮದ ಸರ್ವೆ ನಂ 59/1 ಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ 1 ಎಂದು,

2. ಹಕ್ಕು ಬದಲಾವಣೆ ವಹಿಯ ದೃಡೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ 2 ಎಂದು,

3. ಮೂಲ ದಾವೆ ಸಂ 128/2016 ರ ಆದೇಶ ಪುಟದ ದೃಡೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ 3 ಎಂದು,

4. ಮೂಲ ದಾವೆ ಸಂ. 128/2016 ರಲ್ಲಿ ಸಲ್ಲಿಸಿದ ದಾವಾ ಪತ್ರ ಮತ್ತು ತಿದ್ದುಪಡಿ ದಾವಾ ಪತ್ರಗಳ ದ್ಯುಡೀಕೃತ ಪ್ರತಿಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ 4 ಮತ್ತು 5 ಎಂದು,

5. ದಿಃ 10.11.2021 ರಂದು ಮೂಲ ದಾವೆ ಸಂ 128/2016 ರಲ್ಲಿ ಸಲ್ಲಿಸಿದ ಮೆಮೊ ದ ದ್ಯುಡೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ 6 ಎಂದು,

6. ದಿಃ 24.09.2022 ರಂದು 2 ನೇ ವಾದಿ ಪಿ.ಡಿ.ಓ ಗ್ರಾಮ ಪಂಚಾಯತ್ ರಿಪ್ಪನ್‌ಪೇಟೆಗೆ ನೀಡಿರುವ ತಕರಾರಿನ ಸ್ವೀಕೃತಿ ಪ್ರತಿಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ 7 ಎಂದು,

7. ದಿಃ 24.09.2022 ರಂದು 2 ನೇ ವಾದಿ ಕಾರ್ಯ ಪಾಲಕ ಅಭಿಯಂತರರು ಮೆಸ್ಕಾಂ ರಿಪ್ಪನ್‌ಪೇಟೆಗೆ ನೀಡಿರುವ ತಕರಾರಿನ ಸ್ವೀಕೃತಿ ಪ್ರತಿಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ 8 ಎಂದು ಗುರುತಿಸಲಾಯಿತು.

ನನ್ನ ಮಾಗಣೆಯಂತೆ ದಾವೆಯನ್ನು ಡಿಕ್ರಿ ಮಾಡಲು ಕೋರುತ್ತೇನೆ .

(ಮುಂದುವರೆದ ಮುಖ್ಯ ವಿಚಾರಣೆಗೆ  ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಗಿದೆ.)

(ತೆ ನ್ಯಾ  ನನ್ನ ಹೇ ಬೆ ಮಾಡಲಾಗಿದೆ)

ನನ್ನ ಸಮಕ್ಷಮ,

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ಹೊಸನಗರ.